( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 02/04/2024**
**ಅಸಲು ದಾವೆ.ನಂ.172/2015**
**ಪಿ.ಡಬ್ಲ್ಯೂ1**

( ಮುಂದುವರೆದ ಪಾಟೀ ಸವಾಲುಃ ಶ್ರೀ.ಆರ್.ಕೆ.ಎಂ. ವಕೀಲರಿಂದ ಪ್ರತಿವಾದಿಗಳ ಪರವಾಗಿ )

ನನ್ನ ಪತಿಯಾದ ಈಶ್ವರೇಗೌಡರವರ ತಂದೆಯ ಹೆಸರು ಬಕ್ಕೇಗೌಡ. ಬಕ್ಕೇಗೌಡರ ತಂದೆಯ ಹೆಸರು ಗೌಡೇಗೌಡ. ಸದರಿ ಗೌಡೇಗೌಡರ ಪತ್ನಿಯ ಹೆಸರು ಕಾಳಮ್ಮ ಎಂದರೆ ಸರಿ. ಸದರಿ ಬಕ್ಕೇಗೌಡ ಅಂದರೆ ನನ್ನ ಮಾವನ ಪತ್ನಿಯ ಹೆಸರು ಎಲ್ಲಾ ದಾಖಲೆಗಳ ಪ್ರಕಾರ ನಾಗಮ್ಮ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಅವರನ್ನು ನಿಂಗಮ್ಮ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಒಂದನೇ ಪ್ರತಿವಾದಿಯಾದ ತಾಯಿಯಾದ ಭದ್ರಮ್ಮಃಉಃ ಜಯಮ್ಮ ರವರ ತಂದೆಯ ಹೆಸರು ಕಾಡೇಗೌಡ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಡೇಗೌಡರವರ ಪತ್ನಿಯ ಹೆಸರು ಗೌರಮ್ಮ ಎಂದರೆ ನನಗೆ ಗೊತ್ತಿಲ್ಲ.

ತಾಲ್ಲೂಕು ಕಛೇರಿಗೆ ಅರ್ಜಿಯನ್ನು ನೀಡಿ ನಮ್ಮ ಕುಟುಂಬದ ವಂಶವೃಕ್ಷವನ್ನು ಪಡೆದುಕೊಳ್ಳಲು ನಾನು ಪಡೆದುಕೊಳ್ಳಲು ಯಾವುದೇ ರೀತಿಯ ಪ್ರಯತ್ನ ಮಾಡಿರುವುದಿಲ್ಲ. ನಿಮ್ಮ ಪತಿ ಬದುಕಿದ್ದ ಸಮಯದಲ್ಲಿ ಕಂದಾಯವನ್ನು ರಶೀದಿ ಪಟ್ಟ ಪುಸ್ತಕದ ಮೂಲಕ ಕಟ್ಟಲಾಗುತ್ತಿದ್ದು ಅದನ್ನು ನೀವು ಎಂದರೆ ಸಾಕ್ಷಿಯು ಕಂದಾಯವನ್ನು ಕಟ್ಟುತ್ತಿದ್ದರು ಎಂದು ನುಡಿಯುತ್ತಾರೆ. ಭದ್ರಮಃಉಃ ಜಯಮ್ಮ ಎಂದರೆ ಒಂದನೇ ಪ್ರತಿವಾದಿಯ ತಾಯಿ ಎಂದರೆ ನನಗೆ ಗೊತ್ತಿಲ್ಲ. ಒಂದರಿಂದ ಮೂರನೇ ಪ್ರತಿವಾದಿಗಳ ತಾಯಿಯ ಹೆಸರು ನನಗೆ ಗೊತ್ತಿಲ್ಲ.

1985-86 ರಲ್ಲಿ ದಾವಾ ಅನುಸೂಚಿ ಸರ್ವೆ ನಂ.85 ರ 34 ಗುಂಟೆಯ ಜಮೀನಿನ ಪೈಕಿ ನನ್ನ ಪತಿಯ ಹೆಸರಿಗೆ 17 ಗುಂಟೆ ಮತ್ತು 1 ರಿಂದ 3 ನೇ ಪ್ರತಿವಾದಿಯ ತಾಯಿಯಾದ ಜಯಮ್ಮಃಉಃ ಭದ್ರಮ್ಮ ರವರ ಹೆಸರಿಗೆ 17 ಗುಂಟೆಯ ಜಮೀನಿನ ಖಾತೆ ಆಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಪತಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ತಾಯಿ ಜಮೀನುಗಳನ್ನು ಹಿಸ್ಸೆ ಮಾಡಿಕೊಂಡ ಸಂದರ್ಭದಲ್ಲಿ ಚಿಕ್ಕಬೆಮ್ಮತ್ತಿ ಗ್ರಾಮದ ಸ.ನಂಃ 58/1 ಬಿರಲ್ಲಿ 1 ಎಕರೆ 2 ಗುಂಟೆ, ಸ.ನಂಃ47/4 ಪಿರಲ್ಲಿ 2 ಗುಂಟೆ ಹಾಗೂ ಸ.ನಂಃ 125/2 ರಲ್ಲಿ 5 ಗುಂಟೆ ಜಮೀನು ಹಾಗೂ ದಾವಾ ಅನುಸೂಚಿ ಸ್ವತ್ತು 1 ರಿಂದ 3 ನೇ ಪ್ರತಿವಾದಿಗಳ ತಾಯಿಯಾದ ಭದ್ರಮಃಉಃ ಜಯಮ್ಮನವರ ಹಿಸ್ಸಗೆ ಹೋಗಿತ್ತು ಎಂದರೆ ಸಾಕ್ಷಿಯು ನಮಗೂ ಅದಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ.ನಂಃ 85/3 ರ ಜಮೀನಿನ ಕೈ ಬರಹದ ಪಹಣಿ ಪತ್ರಿಕೆಗಳು ಹಾಗೂ ಮುಲ ದಾಖಲೆಗಳನ್ನು ನಾನು ನೋಡಿರುತ್ತೇನೆ.

ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಅದು ಚಿಕ್ಕಬೆಮ್ಮತ್ತಿ ಗ್ರಾಮದ ಸ.ನಂಃ 85/3 ರಲ್ಲಿ 34 ಗುಂಟೆ ಜಮೀನಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿಯ ಹೌದು ಎಂದುನುಡಿಯುತ್ತಾರೆ. ಸದರಿ ಕೈ ಬರಹದ ಪಹಣಿಯಲ್ಲಿ ನಮೂದಿಸಿರುವ ನಿಂಗಮ್ಮ ಕೋಂ ಈಶ್ವರೇಗೌಡ ಎಂದರೆ ನಾನೇ. ಅದರಲ್ಲಿ ನಮೂದಿಸಿರುವ ತಮ್ಮೇಗೌಡ ಬಿನ್ ಜಯಮ್ಮಃಉಃಭದ್ರಮ್ಮ ಎಂದರೆ 1 ನೇ ಪ್ರತಿವಾದಿ ಎಂದರೆ ಸರಿ. ಸದರಿ ಪಹಣಿಯನ್ನು ನಿಶಾನೆಗೊಳಿಸಬೇಕು ಎಂದು ಕೋರುತ್ತಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು.

ಚಿಕ್ಕಬೆಮ್ಮತ್ತಿ ಗ್ರಾಮದ ಸ.ನಂಃ47/4 ರಲ್ಲಿರಸಿ 18 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಸೇರಿದ್ದು, ಸದರಿ ಕೈ ಬರಹದ ಪಹಣಿಯಲನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಮೂದಿಸಿರುವ ನಿಂಗಮ್ಮ ಕೋಂ ಈಶ್ವರೇಗೌಡ ಎಂದರೆ ನೀವೆ ಎಂದರೆ ಸಾಕ್ಷಿಯ ಹೌದು ಎಂದು ನುಡಿಯುತ್ತಾರೆ. ಅದರಲ್ಲಿ ನಮೂದಿಸಿರುವ ತಮ್ಮೇಗೌಡ ಬಿನ್ ಜಯಮ್ಮಃಉಃಭದ್ರಮ್ಮ ಎಂದರೆ 1 ನೇ ಪ್ರತಿವಾದಿ ಎಂದರೆ ಸರಿ. ಸದರಿ ಪಹಣಿಯನ್ನು ನಿಶಾನೆಗೊಳಿಸಬೇಕು ಎಂದು ಕೋರುತ್ತಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಮೇರೆಗೆ ನಿಡಿ-2 ಎಂದು ಗುರುತಿಸಲಾಯಿತು.

ಚಿಕ್ಕಬೆಮ್ಮತ್ತಿ ಗ್ರಾಮ ಸ.ನಂಃ 58/1 ಬಿರಲ್ಲಿ ಗೌಡೇಗೌಡರ ಹೆಸರಿನಲ್ಲಿರುವ ಜಮೀನು ನಿಮ್ಮ ಕುಟುಂಬಕ್ಕೆ ಸೇರಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗೌಡೇಗೌಡರವರು ನನ್ನ ಪತಿಯ ತಾತ. ಸ.ನಂಃ85/3 ರಲ್ಲಿರುವ ಜಮೀನು ಮೂಲತಃ ನಿಮ್ಮ ತಾತನಾದ ಗೌಡೇಗೌಡ ಬಿನ್ ಗೌಡೇಗೌಡರಿಗೆ ಮೂಲತಃವಾಗಿ ಸೇರಿದ್ದು, ಅದನ್ನು ನನ್ನ ಪತಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ತಾಯಿ 17 ಗುಂಟೆ ಪ್ರಕಾರ ಹಂಚಿಕೊಂಡಿದ್ದು, ಆ ಪ್ರಕಾರ ಪಹಣಿಯಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯ ಸುಳ್ಳು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ.ನಂಃ 85/3 ರಲ್ಲಿ ನನ್ನ ಪತಿಯು ಹಿಸ್ಸಗೆ ಹೋದ 17 ಗುಂಟೆ ಜಮೀನು ದಕ್ಷಿಣಕ್ಕೆ ಬರುತ್ತದೆ.

ದಾವಾ ಅನುಸೂಚಿ ಸ್ವತ್ತು ಸ.ನಂಃ85/3 ರ ಜಮೀನು ದುರಸ್ತಾದಾದ ನಂತರ ಸ.ನಂಃ 85/15 ಎಂದು ಪೋಡು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತು ಮೂಲತಃ 1 ನೇ ಪ್ರತಿವಾದಿಯ ಮುತ್ತಜ್ಜನಾದ ಗೌಡೇಗೌಡರಿಗೆ ಸೇರಿದ್ದು ಎಂದರೆ ಸಾಕ್ಷಿಯು ಅದು ಗೌಡೇಗೌಡರಿಗೆ ಸೇರಿದ್ದು ಎಂದರೆ ಸರಿ ಸದರಿ ಗೌಡೇಗೌಡರು 1 ನೇ ಪ್ರತಿವಾದಿಯ ಮುತ್ತಜ್ಜ ಅಲ್ಲ ಎಂದು ನುಡಿಯುತ್ತಾರೆ. ಸದರಿ ಗೌಡೇಗೌಡರಿಗೆ ಬಕ್ಕೇಗೌಡ ಹಾಗೂ ಕಾಡೇಗೌಡ ಎಂದು ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಸದರಿ ಬಕ್ಕೇಗೌಡರಿಗೆ ಈಶ್ವರೇಗೌಡ ಮತ್ತು ರಾಜಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ರಾಜಮ್ಮನವರು ಮದುವೆಯಾಗಿ ಪತಿಯ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಗೌಡೇಗೌಡರ 2 ನೇ ಮಗನಾದ ಕಾಡೇಗೌಡರಿಗೆ ಜಯಮ್ಮಃಉಃಭದ್ರಮ್ಮ ಮತ್ತು ಪುಟ್ಟಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. 1

ರಿಂದ 3 ನೇ ಪ್ರತಿವಾದಿಗಳು ಸದರಿ ಭದ್ರಮ್ಮನವರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪುಟ್ಟಮ್ಮರವರಿಗೆ ನೀಲ ಎಂದು ಮಗಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಬಕ್ಕೇಗೌಡ ಮತ್ತು ಕಾಡೇಗೌಡರವರು ಜಮೀನುಗಳನ್ನು ಹಿಸ್ಸೆ ಮಾಡಿಕೊಂಡಾಗ, ದಾವಾ ಅನುಸೂಚಿ ಸ್ವತ್ತು ಕಾಡೇಗೌಡರ ಹಿಸ್ಸೆಗೆ ಹೋಗಿತ್ತು ಎಂದರೆ ಸರಿಯಲ್ಲ. ಸದರಿ ಕಾಡೇಗೌಡರವರು ಪೌತಿಯಾದ ನಂತರ ಅವರು ಮಕ್ಕಳಾದ ಜಯಮ್ಮ ಮತ್ತು ಪುಟ್ಟಮ್ಮನವರಿಗೆ ದಾವಾ ಅನುಸೂಚಿ ಸ್ವತ್ತು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ಮತ್ತು ಅವರ ಪತಿಯಾದ ರಾಮೇಗೌಡರವರು ಪೌತಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಯವಮ್ಮನವರು ಮರಣ ಹೊಂದಿದ ನಂತರ ಸದರಿ ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿಯು 34 ಗುಂಟೆ ಜಮೀನು ಕೂಡ ನಮ್ಮ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಏನು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿಯು ನಾವೇ ಬೆಳೆ ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ತಾಯಿಂದ 1 ನೇ ಪ್ರತಿವಾದಿಗೆ ಬಂದು, 1 ನೇ ಪ್ರತಿವಾದಿಯೇ ಅದರ ಸ್ವಾಧೀನದಲ್ಲಿ ಇದ್ದಾರೆ, ನೀವು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ ನಾವೇ ಸ್ವಾಧೀನದಲ್ಲಿ ಇದ್ದೇವೆ ನಮಗೆ ಪ್ರತಿವಾದಿಯರು ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ.ನಂಃ 34 ಗುಂಟೆ ಜಮೀನು ನಮಗೆ ಸೇರಿಬೇಕು ಎಂದು ನಾನು ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನ ಮತ್ತು ಸಂಬಂಧ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಯು ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**